Government of Karnataka
(Rural Development and Panchayath Raj Department)
Karnataka Rural Infrastructure Development Limited
Grameenabhivruddhi Bhavana, 4th & 5th Floor, Anandarao Circle, Bengaluru - 560 009.
Phone No : Admn : 080-28015635/36/46 Works : 080-28015640/41 Accts : 080-28015634/37
Fax No : 080-22879901, 28015644/45/34 Email Id : md@kridl.net Website : www.kridl.org

ಸಂ: ಕೆಆರ್ಐಡಿಎಲ್/ಸಿಬ್ಬಂದಿ/ನೇಮಕಾತಿ/ರಾಜ್ಯ ವೃಂದ/2017-18 ದಿನಾಂಕ:22-02-2018

# ಅಧಿಸೂಚನೆ

**ವಿಷಯ:** ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ನಲ್ಲಿ **ಸಹಾಯಕ ವಾಸ್ತುಶಿಲ್ಪ** ಹುದ್ದೆಗೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರಿ ಆದೇಶ ಸಂ:ಸಿಆಸುಇ 97 ಸೆನೆನಿ 2002 ದಿನಾಂಕ 22-12-2002

2. ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಸಿಆಸುಇ/149/ಸೆನೆನಿ/2010 ದಿನಾಂಕ:18.10.2010
3. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/78/ಹೈಕಕೋ/2014 ದಿನಾಂಕ:16.11.2016
4. ಅಧಿಸೂಚನೆ ಸಂ:ಕೆಆರ್ಐಡಿಎಲ್/ಇಎಸ್‌ಟಿ/ನೇಮಕಾತಿ/ಉಳಿದ ಮೂಲ/2016-17/2 ದಿನಾಂಕ 19-10-2017.
5. ಸಂಖ್ಯೆ:ಕೆಆರ್ಐಡಿಎಲ್/ಸಿಬ್ಬಂದಿ/ನೇರ ನೇಮಕಾತಿ/ಉಳಿದ ಮೂಲ/2017-18 ದಿನಾಂಕ: 01-01-2018.

\# # #

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ನ ಅಧಿಸೂಚನೆ ಸಂ:ಕೆಆರ್ಐಡಿಎಲ್/ಇಎಸ್‌ಟಿ/ನೇಮಕಾತಿ/ಉಳಿದ ಮೂಲ/2016-17/2 ದಿ.19-10-2017 ರಲ್ಲಿ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಉಲ್ಲೇಖ (2) ರನ್ವಯ ಅರ್ಹ ಅಭ್ಯರ್ಥಿಗಳ ಮೂಲದಾಖಲಾತಿಗಳನ್ನು ಪರಿಶೀಲಿಸಿ, ಮೀಸಲಾತಿ ಮತ್ತು ಶೇಕಡವಾರು ಅಂಕಗಳ ಆಧಾರದ ಮೇಲೆ **ಸಹಾಯಕ ವಾಸ್ತುಶಿಲ್ಪ** ಹುದ್ದೆಯ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಈ ಕೆಳಕಂಡಂತೆ ತಯಾರಿಸಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಈ ಆಯ್ಕೆಪಟ್ಟಿಯಿಂದ ಬಾಧಿತರಾದ ಅಭ್ಯರ್ಥಿಗಳು ಆಕ್ಷೇಪಣೆಗಳಿದ್ದಲ್ಲಿ, ಆಕ್ಷೇಪಣೆಯನ್ನು ಲಿಖಿತರೂಪದಲ್ಲಿ ಈ ಆಯ್ಕೆಪಟ್ಟಿಯನ್ನು ಪ್ರಕಟಿಸಿದ **ಏಳು (7) ದಿನಗಳೊಳಗೆ ಮುಖ್ಯ ಆಡಳಿತಾಧಿಕಾರಿಗಳು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, "ಗ್ರಾಮೀಣಾಭಿವೃದ್ಧಿ ಭವನ", 4ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009** ಇವರಿಗೆ ಸಲ್ಲಿಸತಕ್ಕದ್ದು, ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಿ, ಮೂಲ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಯಾವುದಾದರು ದಾಖಲೆಗಳನ್ನು/ಅಂಕಪಟ್ಟಿಗಳನ್ನು ಸಲ್ಲಿಸಲು ವಿಫಲರಾಗಿರುವ ಅಭ್ಯರ್ಥಿಗಳು ದಾಖಲೆಗಳು/ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ ಮತ್ತು ಮೂಲ ದಾಖಲಾತಿ ಪರಿಶೀಲನೆಗೆ ಆಹ್ವಾನಿಸಿರುವ ಅಭ್ಯರ್ಥಿಗಳಲ್ಲಿ ಗೈರುಹಾಜರಾಗಿರುವ ಅಭ್ಯರ್ಥಿಗಳ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.**

## ರಾಜ್ಯ ವೃಂದದ ತಾತ್ಕಾಲಿಕ ಆಯ್ಕೆಪಟ್ಟಿ

| Sl No | Appliction ID | Name of the Candidate | DOB | Gender | Percentage | Selected Category |
|---|---|---|---|---|---|---|
| 1 | AEA700004 | PRAVEEN V | 22-08-1990 | MALE | 81.40 | CAT-1 |

**ಈ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳ ಆಯ್ಕೆಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

1. ಈ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರನ್ನು ಸೇರಿಸಿರುವ ಕಾರಣದಿಂದಾಗಿಯೇ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.

# Government of Karnataka

(Rural Development and Panchayath Raj Department)

## Karnataka Rural Infrastructure Development Limited

Grameenabhivruddhi Bhavana, 4th & 5th Floor, Anandarao Circle, Bengaluru - 560 009.
Phone No : Admn : 080-28015635/36/46 Works : 080-28015640/41 Accts : 080-28015634/37
Fax No : 080-22879901, 28015644/45/34 Email Id : md@kridl.net Website : www.kridl.org




2. ಈ ಆಯ್ಕೆಯು ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿಗಳನ್ನು/ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪರೀಕ್ಷಾ ಪ್ರಾಧಿಕಾರದಿಂದ ನೈಜತೆ ಪರಿಶೀಲನೆಗೆ ಒಳಪಡಿಸಿ ಅವರು ನೀಡಲಾಗುವ ಅಭಿಪ್ರಾಯಕ್ಕೆ ಒಳಪಟ್ಟಿರುತ್ತದೆ. ಯಾವುದೇ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳ/ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ಪುನರ್ ಪರಿಶೀಲಿಸಿ ಯಾವುದೇ ಸೂಚನೆ ನೀಡದಂತೆ ರದ್ದುಗೊಳಿಸಲಾಗುವುದು.
3. ಮೂಲ ದಾಖಲಾತಿ ಪರಿಶೀಲನೆಗೆ ಅವಧಿ ಮೀರಿದ ಮತ್ತು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ನಂತರ ಪಡೆದ ಜಾತಿ ಪ್ರಮಾಣ ಪತ್ರಗಳನ್ನು/ಇತರೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಅಧಿಸೂಚನೆಯನ್ವಯ ಪರಿಗಣಿಸಲಾಗಿರುವುದಿಲ್ಲ.
4. ಯಾವುದೇ ಅಭ್ಯರ್ಥಿಯು ಆಯ್ಕೆಗೆ ಅನರ್ಹ ಎಂದು ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯ ಅರ್ಜಿಯನ್ನು ಪುನರ್ ಪರಿಶೀಲಿಸಿ ತಿರಸ್ಕರಿಸುವ ಹಕ್ಕು ಸಂಸ್ಥೆಯು ಹೊಂದಿರುತ್ತದೆ.
5. ಅಂಗವಿಕಲ ಮೀಸಲಾತಿಯಡಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸುವ ಷರತ್ತಿಗೊಳಪಟ್ಟಿರುತ್ತದೆ.
6. ಕರ್ನಾಟಕ ನ್ಯಾಯಾಲಯದಲ್ಲಿ ಹೂಡಲಾಗುವ ಪ್ರಕರಣಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
7. ಈ ತಾತ್ಕಾಲಿಕ ಆಯ್ಕೆಪಟ್ಟಿಯು ಪುನರ್ ಪರಿಶೀಲನೆಗೆ ಒಳಪಡುವ ಷರತ್ತಿಗೊಳಪಟ್ಟಿರುತ್ತದೆ.

ಟಿಪ್ಪಣಿ ಮಾನ್ಯ ವ್ಯ.ನಿ.ರವರಿಂದ
ಅನುಮೋದಿಸಲ್ಪಟ್ಟಿದೆ.

Shreeroopa 22/2

ಮುಖ್ಯ ಆಡಳಿತಾಧಿಕಾರಿಗಳು,
ಕೆಆರ್‌ಐಡಿಎಲ್, ಬೆಂಗಳೂರು